ವಿನಂತಿ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರೂ ವಿನಂತಿ ಮಾಡಿದ್ದಾರೆ. ಎಲ್ಲರೂ ವಿನಂತಿ ಮಾಡಿದಾಗ ಇವರು ಧರಣಿ ಮಾಡುವುದು ಸರಿಯಲ್ಲ, ನಾನು ಕೂಡ ಮತ್ತೊಂದು ಸಾರಿ ವಿನಂತಿ ಮಾಡುತ್ತೇನೆ. ಈ ವಿಷಯವನ್ನು ಕೇಂದ್ರಕ್ಕೆ ಹೇಳತಕ್ಕ ಕಾರ್ಯಕ್ರಮ ಈಗಾಗಲೇ ನಡೆದಿದೆ. ಆ ಕಾರ್ಯಕ್ಕೆ ಎಲ್ಲರೂ ಹೋಗುತ್ತಿದ್ದೇವೆ. ಎಲ್ಲ ಪಕ್ಷದ ಸದಸ್ಯರೂ ಹೋಗುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು, ವಿರೋಧ ಪಕ್ಷದ ನಾಯಕರು ಇವತ್ತು ಚರ್ಚೆಯಲ್ಲಿ ಭಾಗಿಯಾಗುವುದಕ್ಕೆ ಅನುವು ಮಾಡಿಕೊಡಬೇಕೆಂದು ಮತ್ತೊಂದು ಸಾರಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾನು ವಿರೋಧಪಕ್ಷದ ನಾಯಕರ ಹತ್ತಿರ ಮಾತನಾಡಿದೆ. ಸದನದಲ್ಲಿ ಅಂದರೆ ಇಲ್ಲಿ ನಡೆಯತಕ್ಕ ಚರ್ಚೆಗೂ ತೆರೆಯ ಮರೆಯಲ್ಲಿ ನಡೆಯತಕ್ಕ ಚರ್ಚೆಗೂ ಬಹಳ ವ್ಯತ್ಯಾಸ ಇರುತ್ತದೆ. ದಯಮಾಡಿ ತಾವು ಚರ್ಚೆಗೆ ಅವಕಾಶ ಕಲ್ಪಿಸಿಕೊಡಿ. ನಾವು ಅವರ ಧರಣಿಗೆ ಸಂಪೂರ್ಣ ಬೆಂಬಲ ಕೊಡುತ್ತೇವೆ. ಆಗುವುದೇ ಇಲ್ಲ ಎಂದರೆ ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ಇದಕ್ಕಿಂತ ಇನ್ನೇನೂ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ನನ್ನ ಅಸಹಾಯಕತೆಯನ್ನು...

ಶ್ರೀ ಮಾಟಾಳ್ ನಾಗರಾಜ್ : ಆಯಿತು. ನಾವು ಧರಣಿ ಮಾಡದೆ ವಿಧಿ ಇಲ್ಲ, ಮಾನ್ಯ ವಿರೋಧಪಕ್ಷದ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ನೀವು ಧರಣಿ ನಡೆಸುತ್ತಿರಿ, ನಾವು ಸಭೆ ನಡೆಸುತ್ತೇವೆ ಎಂದರೆ ನಾವು ವಿಧಿ ಇಲ್ಲ, ಧರಣಿ ಮಾಡಲೇಬೇಕಾಗುತ್ತದೆ.

(ಶ್ರೀ ಮಾಟಾಳ್ ನಾಗರಾಜ್ ಅವರು ಧರಣಿ ಮಾಡಲು ಅಂಗಳಕ್ಕೆ ಬಂದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, 20ನೇ ತಾರೀಖು ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗುತ್ತದೆ. ಸರ್ಕಾರ ತನ್ನ ನಿರ್ದಿಷ್ಟವಾದ ನಿಲುವನ್ನು ಹೇಳಿದರೆ..

ಅಧ್ಯಕ್ಷರು : ನಿರ್ದಿಷ್ಟವಾಗಿ ಹೇಳಿದ್ದಾರೆ. ಸರ್ಕಾರದವರು ಸ್ಪಷ್ಟವಾಗಿ ಹೇಳಿದ್ದಾರೆ. ಅದು ನಿಮಗೆ ಅಸ್ಪಷ್ಟವಾಗಿ ಕೇಳಿಸಿದೆ ಅಷ್ಟೇ.

ಶ್ರೀ ರಾಮಾನಾಥ ರೈ : ಬಿ.ಜೆ.ಪಿ. ಹಾಗೂ ಕನ್ನಡ ಚಳುವಳಿ ಪಕ್ಷಗಳಿರಬೂ ಇಲ್ಲಿ ಒಟ್ಟಾಗಿ ಧರಣಿ ಕುಳಿತಿರುವುದನ್ನು ನೋಡಿದರೆ ಶಿವಸೇನ ಮತ್ತು ಬಿಜೆಪಿ ಒಂದಾಗಿರುವುದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ.

ಶ್ರೀ ಡಿ.ಬಿ. ಚಂಪ್ರೇಗೌಡ : 5 ಗಂಟೆಗೆ ಮುಗಿಸುವ ಸಭೆಯನ್ನು 6 ಗಂಟೆವರೆಗೆ ಮುಂದುವರಿಸಿದರೆ ಏನೂ ನಷ್ಟವಾಗುವುದಿಲ್ಲ, ಒಂದು ಪ್ರಯತ್ನವನ್ನು ಮಾಡುವುದು ಸಭೆಯ ಸಂಪ್ರದಾಯದ ದೃಷ್ಟಿಯಿಂದ ಸರಿಯೆಂದು ಕಾಣುತ್ತದೆ. ತಾವು ಎರಡು ನಿಮಿಷ ಅವಕಾಶ ಕೊಟ್ಟರೆ, ಬಹಳ ಹೆಚ್ಚು ಮಾತನಾಡುವುದು ಅವಶ್ಯಕತೆ ಇಲ್ಲ, ಏನಾದರೂ ದಾಖಲೆಗಳು ಇದ್ದರೆ ಹೀಗೆನೆ ಎಂದು ಹೇಳಿ ಅವರ ಗಮನಕ್ಕೆ ತರಬಹುದು. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿಲ್ಲವೇ? ನಿಮ್ಮ ಹತ್ತಿರ ದಾಖಲೆಗಳು ಇದ್ದರೆ ನನಗೆ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿಲ್ಲವೇ? ಅದನ್ನು ನೀವು ಕೇಳಿಸಿಕೊಂಡಿಲ್ಲವೇ?